ಗುಂಡ್ಲುಪೇಟೆ ತಾಲ್ಲೂಕು ನೀರಾವರಿ ಸೌಲಭ್ಯದಿಂದ ವಂಚಿತವಾಗಿರುವುದು

87 - ಶ್ರೀ ಹೆಚ್. ಎಸ್. ಮಹದೇವ್ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಂಡ್ಲುಪೇಟೆ ತಾಲ್ಲೂಕು ನೀರಾವರಿ ಸೌಲಭ್ಯದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಆ) *ಹಾಗಿದ್ದಲ್ಲಿ, ಅಂತರ್ಜಲ ಬಳಕೆಯಿಂದ ನೀರಾವರಿ ಸೌಲಭ್ಯವನ್ನು ಒದಗಿಸಲು ಸರ್ಕಾರದವರು ಪರಿಶೀಲಿಸುವರೆ?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು) :

ಅ) ಇಲ್ಲ.

ಆ) ಪ್ರಶ್ನೆ (ಅ)ಗೆ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಬೆಂಗಳೂರಿನಲ್ಲಿ ನೀರು ಸರಬರಾಜು ವಿತರಣಾ ಲೈನುಗಳು

88- ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ನಗರ ಪ್ರದೇಶದ ನೀರು ಸರಬರಾಜು ವಿತರಣಾ ಕೊಳವೆಗಳನ್ನು ಬಹಳ ಹಿಂದೆಯೇ ಹಾಕಲಾಗಿದ್ದು ಇವು ತುಕ್ಕು ಹಿಡಿದು ಸರಬರಾಜಿಗೆ ಉಚಿತವಾಗಿಲ್ಲದೆ ಸಾರ್ವಜನಿಕರಿಗೆ ಸಾಕಷ್ಟು ಮತ್ತು ಕ್ರಮವಾದ ನೀರು ಸರಬರಾಜಿನ ವಿತರಣೆಯಲ್ಲಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

2) *ಮೇಲ್ಕಂಡ ಕೊಳವೆಗಳನ್ನು ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚು ಸಾಮರ್ಥ್ಯದ ಕೊಳವೆಗಳೊಂದಿಗೆ ನೀರು ಅಭಾವವಿರುವ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಉದ್ದೇಶಪಟ್ಟಿದೆಯೇ?*

3) *ನೀರಿನ ಅಭಾವದ ನಿವಾರಣೆಗೆ ಹಾಗೂ ಕ್ರಮ ಬದ್ಧ ನೀರು ಸರಬರಾಜಿಗೆ ಪೂರಕವಾಗಲು ನಗರ ಪ್ರದೇಶಕ್ಕೆ ಆದರಲ್ಲೂ ಬಸವನಗುಡಿ ಕ್ಷೇತ್ರದಲ್ಲಿ ಇಂತಹ ಕೊಳವೆಗಳನ್ನು ಬದಲಾಯಿಸುವ ಪ್ರಸ್ತಾವನೆಯಾಗಲಿ ಅಥವಾ ಯೋಜನೆಯಾಗಲೀ ಸರ್ಕಾರದ ಮುಂದಿದೆಯೇ?*

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

1) ಹೌದು. ಕೆಲವು ಭಾಗಗಳಲ್ಲಿ

2) ಹೌದು.

3) ಹೌದು.